ಆದಕಾರಣ ರಾಜ್ಯದಲ್ಲಿ ಈ ಬೆಳೆ ಬೆಳೆದಾಗ ಯಾವ ತೊಂದರೆಗಳೂ ಆಗುವುದಿಲ್ಲವೆಂದು ಕೇಂದ್ರ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆಯವರು ಅಭಿಪ್ರಾಯ ಪಟ್ಟಿದ್ದರ ಮೇರೆಗೆ ಬಿ.ಟಿ.ಹತ್ತಿಯನ್ನು ರಾಜ್ಯದಲ್ಲಿ ಬೆಳೆಯಲು ಕೇಂದ್ರ ಸರ್ಕಾರವು ಅನುಮತಿ ನೀಡಿರುತ್ತದೆ. ಬಿ.ಟಿ.ಹತ್ತಿಯು ರೈತರಿಗೆ ಅನುಕೂಲವೆಂದು ಸರ್ಕಾರ ಭಾವಿಸಿದೆ.

ಈ. ಕೇಂದ್ರ ಸರ್ಕಾರವು ಬಿ.ಟಿ.ಹತ್ತಿ ಬೆಳೆಯಲು ಅನುಮತಿ ನೀಡಿರುವ ಮೇರೆಗೆ ಮಹಿಕೂಮಾನ್ಸಾಂಟೊ ಅಭಿವೃದ್ಧಿ ಪಡಿಸಿರುವ ಬಿ.ಟಿ.ತಳಿಗಳಾದ ಎಂ.ಇ.ಸಿ.ಹೆಚ್-162, ಮತ್ತು ಎಂ.ಇ.ಸಿ.ಹೆಚ್-184 ತಳಿಗಳನ್ನು ಆಯ್ದ 12 ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ. ಸದರಿ ಬೆಳೆಯನ್ನು ಕೇಂದ್ರ ಸರ್ಕಾರವು ನೀಡಿರುವ ಮಾರ್ಗಸೂಚಿಗಳನ್ವಯ ಬೆಳೆಯುವಂತೆ ಸಂಬಂಧಿಸಿದ ಜಿಲ್ಲೆಗಳ ಜಿಲ್ಲಾ ಆಡಳಿತ ವರ್ಗಕ್ಕೆ ಆದೇಶ ನೀಡಲಾಗಿದೆ. ಈ ದಿಶೆಯಲ್ಲಿ ಕೇಂದ್ರ ಸರ್ಕಾರವು ನೀಡುವ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುವುದು.

ರಾಜ್ಯದಲ್ಲಿ ನೀರಾ ಇಳಿಸಲು ಅನುಮತಿ

210 (545)- ಶ್ರೀ ಮಹದೇವಪ್ರಸಾದ್ ಹೆಚ್.ಎಸ್(ಗುಂಡ್ಲಪೇಟೆ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ತೆಂಗಿನ ಮರಗಳಿಂದ ನೀರಾ ಇಳಿಸಲು ಅನುಮತಿ ನೀಡಲು ಉದ್ದೇಶಿಸಲಾಗಿದೆಯೇ?

ಆ. ಉದ್ದೇಶಿಸಿದ್ದರೆ ನೀರಾ ಸಂಸ್ಕರಿಸುವ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಶಿವಣ್ಣ (ತೋಟಗಾರಿಕೆ ಸಚಿವರು)

ಅ. ರೈತರ ಸಹಕಾರ ಸಂಘಗಳ ಮತಿಯಿಂದ ನೀರಾವನ್ನು ಇಳಿಸಿ ನೀರಾ ರೂಪದಲ್ಲೇ ಮಾರಾಟ ಮಾಡುವಂತೆ ಅವಕಾಶ ಕಲ್ಪಿಸಲು ಘೋಷಿಸಲಾಗಿದೆ.

ಆ. ನೀರಾ ಇಳಿಸುವ ತಾಂತ್ರಿಕತೆ ಹಾಗೂ ಸಂಸ್ಕರಣೆ ಬಗ್ಗೆ ತಂತ್ರಜ್ಞಾನ ಅಭಿವೃದ್ಧಿಪಡಿಸಲು ಕೇಂದ್ರ ಆಹಾರ ಸಂಶೋಧನಾ ಸಂಸ್ಥೆ ಹಾಗೂ ರಕ್ಷಣಾ ಆಹಾರ ಸಂಶೋಧನಾ ಸಂಸ್ಥೆ ಮೈಸೂರು ಇವರಿಗೆ ರೂ. 11.86 ಲಕ್ಷ ಅನುದಾನವನ್ನು ನೀಡಲಾಗಿದೆ. ಸಂಶೋಧನೆ ಪ್ರಗತಿಯಲ್ಲಿದೆ.

ಕೊಪ್ಪಳ ಜಿಲ್ಲೆಯಲ್ಲಿ ಕಲಿಕಾ ಕೇಂದ್ರಗಳು

177 (1405)- ಶ್ರೀ ಶಿವಶರಣಪ್ಪ ಗೌಡ ಪಾಟೀಲ್ (ಯಲ್‌ಬುರ್ಗಾ) : ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಹಾಗೂ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕೊಪ್ಪಳ ಜಿಲ್ಲೆಯಲ್ಲಿ ಮುಂದ್ರವರೆದ ಶಿಕ್ಷಣ ಕಲಿಕಾ ಕೇಂದ್ರಗಳಲ್ಲಿ ಅವಶ್ಯಕ ಸಾಮಗ್ರಿಗಳ ಖರೀದಿಯಲ್ಲಿ ಲಕ್ಷಾಂತರ ರೂಪಾಯಿ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ. ಯಾವ ಸಂಸ್ಥೆಗಳು ಯಾವ ಯಾವ ಸಾಮಗ್ರಿಗಳನ್ನು ಪೂರೈಸಿರುವರು: ಒಟ್ಟು ಮೊತ್ತ ಎಷ್ಟು?

ಇ. ಖರೀದಿಸಿರುವಾಗ ಸರ್ಕಾರದ ನಿಯಮಗಳನ್ನು ಪಾಲಿಸಿರುವರೇ?

ಈ. ಹಾಗಿದ್ದಲ್ಲಿ, ತಪ್ಪಿತಸ್ಥರ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ಅಥವಾ ಕ್ರಮ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ?

ಶ್ರೀ ಬಾಬುರಾವ್ ಚಿವ್ವಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಹಾಗೂ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ. ಅನ್ಯವಹಾರದ ಬಗ್ಗೆ ದೂರು ಬಂದಿದೆ.

ಆ. ಮೊದಲನೆಯ ಹಂತದಲ್ಲಿ ಪ್ರಾರಂಭಿಸಿದ 108 ಮುಂದುವರಿಕೆ ಶಿಕ್ಷಣ ಕೇಂದ್ರ ಮತ್ತು 12 ನೋಡಲ್ ಮುಂದುವರಿಕೆ ಶಿಕ್ಷಣ ಕೇಂದ್ರಗಳಿಗೆ ಸಾಮಗ್ರಿಗಳನ್ನು ಪೂರೈಸಿದ ಸಂಸ್ಥೆಗಳ ಪಟ್ಟಿಯನ್ನು ಲಗತ್ತಿಸಿದೆ. ಉಳಿದ ಕೇಂದ್ರಗಳಲ್ಲಿ ಖರೀದಿ ಪ್ರಕ್ರಿಯೆ ನಡೆಯುತ್ತಿದೆ. ಸಾಮಗ್ರಿಗಳ ಖರೀದಿಗಾಗಿ ವೆಚ್ಚ ಮಾಡಿದ ಒಟ್ಟು ಮೊತ್ತ ರೂ.20,20,004.00 ಮೊತ್ತ ಆಗಿರುತ್ತದೆ.

ಇ. ಪಾಲಿಸಿದೆ.

ಈ. ತಪ್ಪಾಗಿರುವ ನಿರ್ದಿಷ್ಟ ಪ್ರಕರಣಗಳು ಕಂಡುಬಂದಲ್ಲಿ ತನಿಖೆಗೆ ಆದೇಶ ಮಾಡಲಾಗುವುದು.

ಕೊಪ್ಪಳ ಜಿಲ್ಲೆಯ ನೋಡಲ್ ಮುಂದುವರಿಕೆ ಶಿಕ್ಷಣ ಕೇಂದ್ರ ಮತ್ತು ಮುಂದುವರಿಕೆ ಶಿಕ್ಷಣ ಕೇಂದ್ರಗಳಿಗೆ ಸಾಮಗ್ರಿ ಸರಬರಾಜು ಮಾಡಿದ ಸಂಸ್ಥೆಗಳ ವಿವರ

ಕ್ರಸಂ	ಸಂಸ್ಥೆಯ ಹೆಸರು	ಸರಬರಾಜು ಮಾಡಿದ ಸಾಮಗ್ರಿಗಳು
1	2	3
1.	ಶ್ರೀರಾಮ ಇಂಜಿನಿಯರಿಂಗ್ ವರ್ಕ್ಸ್ ಗೋಶಾಲೆ ರಸ್ತೆ ಕೊಪ್ಪಳ	ಸ್ಟೀಲ್ ಅಲ್ಮೇರಾ, ಸ್ಟೀಲ್ ಟೇಬಲ್ ಸ್ಟೀಲ್ ರ್ಯಾಕ್, S ಟೈಪ್ ಕುರ್ಚಿ ಫೋಲ್ಡಿಂಗ್ ಚೇರ್
2.	ಮೊಹರಾ ಸ್ಟೀಲ್ ಫರ್ನಿಚರ್ಸ್, ಹುಬ್ಬಳ್ಳಿ	ಸ್ಟೀಲ್ ಅಲ್ಮೇರಾ, ಸ್ಟೀಲ್ ಟೇಬಲ್, ಸ್ಟೀಲ್ ರ್ಯಾಕ್, S ಟೈಪ್ ಕುರ್ಚಿ ಫೋಲ್ಡಿಂಗ್ ಚೇರ್
3.	ಸುನಿಲ್ ಎಂಟರ್ ಪ್ರೈಸಸ್, ಹೆಸಹಳ್ಳಿ, ತಾ.ಗಂಗಾವತಿ	ಸ್ಟೀಲ್ ಅಲ್ಮೇರಾ, ಸ್ಟೀಲ್ ಟೇಬಲ್, ಸ್ಟೀಲ್ ರ್ಯಾಕ್, S ಟೈಪ್ ಕುರ್ಚಿ ಫೋಲ್ಡಿಂಗ್ ಚೇರ್, ಪೆಟ್ರೋಮ್ಯಾಕ್ಸ್, ವಾಟರ್ ಟ್ಯಾಂಕ್, ಜಗ್ ಮತ್ತು ಸ್ಟೀಲ್ ಗ್ಲಾಸ್
4.	ನಾಹಾ ಅಸೋಸಿಯೇಟ್ಸ್, ಹುಬ್ಬಳ್ಳಿ	ಸ್ಟೀಲ್ ಅಲ್ಮೇರಾ, ಸ್ಟೀಲ್ ಟೇಬಲ್, ಸ್ಟೀಲ್ ರ್ಯಾಕ್, S ಟೈಪ್ ಕುರ್ಚಿ ಫೋಲ್ಡಿಂಗ್ ಚೇರ್
5.	ಎಂ.ಕೆ.ಸ್ಟೀಲ್ ಫರ್ನಿಚರ್ ವರ್ಕ್ಸ್, ಕುಪ್ಪಗಿ	ಸ್ಟೀಲ್ ಅಲ್ಮೇರಾ, ಸ್ಟೀಲ್ ಟೇಬಲ್, ಸ್ಟೀಲ್ ರ್ಯಾಕ್, S ಟೈಪ್ ಕುರ್ಚಿ ಫೋಲ್ಡಿಂಗ್ ಚೇರ್ ಪೆಟ್ರೋಮ್ಯಾಕ್ಸ್,

1	2	3
		ಸ್ಟೀಲ್ ಪಾಟ್, ಸ್ಟೀಲ್ ಟ್ಯಾಂಕ್, ಕಾರ್ಪೆಟ್, ಸೈಕಲ್, ಚಿತ್ರಪಟ, ಭೂಪಟ, ನಾಯಕರ ಭಾವಚಿತ್ರಗಳು, ಸ್ಟೀಲ್ ಗ್ಲಾಸ್ ವಾಲಿಬಾಲ್ ನಟ್, ರಿಂಗ್ ಬಾಲ್ ನಟ್.
6.	ನೌಸಕ್ ಎಂಟರ್ ಪ್ರೈಸಸ್, ಹುಬ್ಬಳ್ಳಿ	ಸ್ಟೀಲ್ ಅಲ್ಮೇರಾ, ಸ್ಟೀಲ್ ಟೇಬಲ್, ಸ್ಟೀಲ್ ರ್ಯಾಕ್, S ಟೈಪ್ ಕುರ್ಚಿ ಫೋಲ್ಡಿಂಗ್ ಚೇರ್
7.	ಬಾಬಾ ಫರೀದ್ ಸ್ಟೀಲ್ ವರ್ಕ್ಸ್ ಶಾಪ್, ಯಲಬುರ್ಗ	ಸ್ಟೀಲ್ ಅಲ್ಮೇರಾ, ಸ್ಟೀಲ್ ಟೇಬಲ್, ಸ್ಟೀಲ್ ರ್ಯಾಕ್, ಪ್ಲಾಸ್ಟಿಕ್ ಚೇರ್
8.	ವೀನಸ್ ಎಂಟರ್ ಪ್ರೈಸಸ್ ಹುಬ್ಬಳ್ಳಿ	ಸ್ಟೀಲ್ ಅಲ್ಮೇರಾ, ಸ್ಟೀಲ್ ಟೇಬಲ್, ಸ್ಟೀಲ್ ರ್ಯಾಕ್, S ಟೈಪ್ ಕುರ್ಚಿ ಫೋಲ್ಡಿಂಗ್ ಚೇರ್
9.	ನ್ಯೂ ಗೋಲ್ಡನ್ ಫರ್ನಿಚರ್ ಹುಬ್ಬಳ್ಳಿ	ಪ್ಲಾಸ್ಟಿಕ್ ಚೇರ್
10.	ಶ್ರೀ ರಾಘವೇಂದ್ರ ಮೆಟಲ್ ಸ್ಟೋರ್ಸ್, ಕೊಪ್ಪಳ	ವಾಟರ್ ಟ್ಯಾಂಕ್, ಜಗ್ ಸ್ಟೀಲ್ ಗ್ಲಾಸ್
11.	ಮೇ.ಬಿ.ಎಸ್.ಗುಡಿ ಸೈಕಲ್ ಸ್ಟೋರ್ಸ್, ಕೊಪ್ಪಳ	ವಾಟರ್ ಟ್ಯಾಂಕ್, ಜಗ್ ಸ್ಟೀಲ್ ಗ್ಲಾಸ್
12.	ಆದರ್ಶ ಪ್ರಿಂಟಿಂಗ್ ಸ್ಟೇಷನರಿ, ಕೊಪ್ಪಳ	ಚಾರ್ಟ್ಸ್, ಕೇರಂ ಬೋರ್ಡ್, ಚೆಸ್, ನಾಯಕರ ಭಾವಚಿತ್ರಗಳು, ಪ್ರಾಣಿಗಳ ಮತ್ತು ಇತರೆ ಚಿತ್ರಪಟಗಳು, ಪೆಟ್ರೋಮ್ಯಾಕ್ಸ್, ವಾಟರ್ ಟ್ಯಾಂಕ್, ಗ್ಲಾಸ್, ಜಗ್.
13.	ಅಕ್ಷರ ಆಪ್ಟೆಯನ್ಸಸ್ ಕಂಪನಿ, ಜವಾಹರ್ ರೋಡ್ ಕೊಪ್ಪಳ	ಬಿಪಿ ಎಲ್ ಕಲರ್ ಟಿವಿ.
14.	ಸಿಟಿ ಎಲೆಕ್ಟ್ರಾನಿಕ್ಸ್, ಬೆಂಗಳೂರು	ಬಿಪಿ ಎಲ್ ಟಿವಿ ಮತ್ತು ಸ್ಪಬಿಲೈಜರ್.
15.	ಮಹತಾ ಸೈಕಲ್ ಸ್ಟೋರ್ಸ್, ಕೊಪ್ಪಳ	ಅಟ್ಲಾಸ್ ಸೈಕಲ್
16.	ತಾಲ್ಲೂಕು ಮಹಿಳಾ ವಿವಿದೋದ್ದೇಶ ಯಲಬುರ್ಗ	ಚಿತ್ರಪಟ, ಭೂಪಟ, ಕೇರಂ, ಚೆಸ್, ಜಮಖಾನ, ಪೆಟ್ರೋಮ್ಯಾಕ್ಸ್, ವಾಲಿಬಾಲ್ ನಟ್, ಖಂಜರ ಇತ್ಯಾದಿ

1	2	3
		ವಾಟರ್ ಟ್ಯಾಂಕ್, ಜಗ್,ಸ್ಟೀಲ್ ಗ್ಲಾಸ್, ರಿಂಗ್ ಬಾಲ್ ನಟ್, ಕೋಲಾಟದ ಸಾಮಗ್ರಿಗಳು, ಕಪ್ಪು ಹಲಗೆ, ರಾಷ್ಟ್ರಧ್ವಜ, ನಾಡಧ್ವಜ.
17.	ಅರಿಹಂತ್ ಅಪ್ಲೈಯನ್ಸಸ್ ಪ್ರೈವೇಟ್ ಲಿ, ಹುಬ್ಬಳ್ಳಿ	ಬಿ ಪಿ ಎಲ್ ಟಿವಿ ಮತ್ತು ಸ್ಪೆಬಿಲೈಜರ್
18.	ರಾಜ್ ಸೈಕಲ್ ಏಜೆನ್ಸಿ, ಗಂಗಾವತಿ	ಅಟ್ಲಾಸ್ ಸೈಕಲ್, ಪೆಟ್ರೋಮ್ಯಾಕ್ಸ್, ಸ್ಟೀಲ್ ವಾಟರ್ ಜಗ್ ಮತ್ತು ಗ್ಲಾಸ್ ಬಿ ಪಿ ಎಲ್ ಟಿವಿ
19.	ರೆಡ್ಡಿ ಎಂಟರ್ ಪ್ರೈಸಸ್, ಗಂಗಾವತಿ	ಬಿ ಪಿ ಎಲ್ ಟಿವಿ
20.	ಸಾಗರ್ ಎಂಟರ್ ಪ್ರೈಸಸ್, ಕುಷ್ಟಗಿ	ವಿಡಿಯೋ ಕಾನ್ ಟಿವಿ, ವಾಲಿಬಾಲ್ ನಟ್, ರಿಂಗ್ ಅಂಡ್ ನಟ್, ಚೆಸ್ ಬೋರ್ಡ್, Physical Instruments
21.	ಸುನಿಲ್ ಎಲೆಕ್ಟ್ರಾನಿಕ್ಸ್, ಗದಗ	ಬಿಪಿ ಎಲ್ ಟಿವಿ

ರಾಜ್ಯದ ಎಲ್ಲಾ ಆಸ್ಪತ್ರೆಗೆ ಸಲಹಾ ಸಮಿತಿ ಸದಸ್ಯರು

178 (1566)- ಶ್ರೀ ಸುಣಗಾರ ಶರಣಪ್ಪ ತಿಪ್ಪಣ್ಣ (ಸಿಂಧಗಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳ ಜಿಲ್ಲಾ ಮತ್ತು ತಾಲ್ಲೂಕು ಸಲಹಾ ಸಮಿತಿ ರಚಿಸಿ ಸದಸ್ಯರನ್ನು ನಾಮಕರಣ ಮಾಡಲಾಗಿದೆಯೇ?

ಆ. ಸಮಿತಿ ರಚಿಸಲು ಸರ್ಕಾರದ ನಿಯಮಗಳು ಇದೆಯೇ? ಇದ್ದಲ್ಲಿ ಯಾವ ನಿಯಮಾನುಸಾರ ಮಾಡಲಾಗುವುದು?

ಇ. ಆಸ್ಪತ್ರೆಗಳ ವೀಕ್ಷಕ ಮತ್ತು ಮೇಲುಸ್ತುವಾರಿ ಸಮಿತಿ ಇದ್ದರೆ ಒಳ್ಳೆಯದಲ್ಲವೆ, (ವಿವರ ಒದಗಿಸುವುದು)?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ. ರಾಜ್ಯದ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಿಗೆ ಸಂದರ್ಶನ ಸಮಿತಿಗಳನ್ನು ರಚಿಸಲಾಗುತ್ತಿದೆ ವಿನ:ಸಲಹಾ ಸಮಿತಿಗಳಲ್ಲ. ಈ ವರೆಗೆ 34 ಆಸ್ಪತ್ರೆಗಳಿಗೆ ಸಂದರ್ಶಕ ಸಮಿತಿಗಳನ್ನು ರಚಿಸಿ ಸದಸ್ಯರನ್ನು ನಾಮಕರಣ ಮಾಡಲಾಗಿದೆ. ಉಳಿದ ಆಸ್ಪತ್ರೆಗಳಿಗೆ ಸಂದರ್ಶಕ ಸಮಿತಿಗಳನ್ನು ರಚಿಸುವ ಪ್ರಸ್ತಾವನೆಗಳು ಸರ್ಕಾರದ ಪರಿಶೀಲನೆಯಲ್ಲಿದೆ. ತಾಲ್ಲೂಕು ಆಸ್ಪತ್ರೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಂದರ್ಶಕ ಸಮಿತಿಯನ್ನು ರಚಿಸಲು ಅಧಿಕಾರವನ್ನು ಜಿಲ್ಲಾ ಪಂಚಾಯತ್ ಇವರಿಗೆ ನೀಡಲಾಗಿದೆ.

ಆ. ಹಾದು